# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ

ಸಿ. ಸಿ. ನಂ. 450/2018

ಸಿಡಬ್ಲ್ಯೂ-1 ಪಿಡಬ್ಲ್ಯೂ-3

| | | |
|---|---|---|
| ಹೆಸರು | : | ಶ್ರೀ ರೇವಣ್ಣ ಸಿದ್ದಪ್ಪ |
| ತಂದೆಯ ಹೆಸರು | : | ಗೇನಪ್ಪ ಗೌಡ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಪಿ ಎಸ್ ಐ ಬೆಂಗಳೂರು |
| ವಾಸ ಸ್ಥಳ | : | ಬೆಂಗಳೂರು |

ದಿನಾಂಕ 18-09-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 08-04-2018 ರಿಂದ 14-10-2018 ರವರೆಗೆ ಪಿ ಎಸ್ ಐ ಆಗಿ ಸೇಡಂ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸಿರುತ್ತೇನೆ.

ಈ ಅವಧಿಯಲ್ಲಿ ದಿನಾಂಕ 18-04-2018 ರಂದು ಸಮಯ ಬೆಳಿಗ್ಗೆ 09-00 ಗಂಟೆಗೆ ನಾನು ಠಾಣೆಯಲ್ಲಿರುವಾಗ ಕಲಕಂಬ ಗ್ರಾಮದಲ್ಲಿ ಅಕ್ರಮ ಸೇಂದಿ ಮಾರಾಟ ಮಾಡುತ್ತಿದ್ದಾರೆ ಎಂಬ ಬಾತನಿ ಸ್ವಿಕರಿಸಿದ ಮೇಲೆ ನಾನು, ಠಾಣಾ ಸಿಬ್ಬಂದಿಯವರಾದ ಚಾ ಸಾ 4, 5, 6, 7 ರವರು ಮತ್ತು ಪಂಚರರಾದ ಚಾಸಾ 2 ಮತ್ತು 3 ರವರ ಜೊತೆಗೆ ಠಾಣೆಯನ್ನು ಬಿಟ್ಟು 09-45 ಕ್ಕೆ ಗ್ರಾಮವನ್ನು ತಲುಪಿರುತ್ತೇವೆ. ಬಾತನಿ ಬಂದ ಸ್ಥಳವನ್ನು ದೂರದಿಂದ ಮರೆಯಲ್ಲಿ ನಿಂತು ನೋಡಲಾಗಿ, ಒಬ್ಬ ಹೆಣ್ಣು ಮಗಳು ಜನರಿಗೆ ಸೇಂದಿ ಮಾರಾಟ ಮಾಡುತ್ತಿದುದ್ದನ್ನು ಖಚಿತ ಪಡಿಸಿಕೊಂಡಿರುತ್ತೇವೆ, ಠಾಣಾ ಮಹಿಳಾ ಸಿಬ್ಬಂದಿಯವರಿಂದ ಅವಳನ್ನು ವಿಚಾರಿಸಲಾಗಿ ಆ ಮಹಿಳೆ ತನ್ನ ಹೆಸರು ಶಾರದಾ ಗಂಡ ಬಸವರಾಜ್ ಗುತ್ತೇದಾರ್ ಅಂತ ತಿಳಿಸಿರುತ್ತಾಳೆ. ಅವಳ ಹತ್ತಿರ ಸೇಂದಿ ಮಾರಾಟ ಮಾಡುವುಕ್ಕೆ ಅವರ ಹತ್ತಿರ ಯಾವುದೇ ಪರವಾನಗಿ ದೊರೆತಿರುವುದಿಲ್ಲ. ಪಂಚರರ ಸಮಕ್ಷಮ ಅವಳನ್ನು ಮತ್ತು ಸ್ಥಳವನ್ನು ಪರಿಶೀಲಿಸಲಾಗಿ ಅವಳ ಹತ್ತಿರ 18 ಸೇಂದಿ ಪ್ಯಾಕೇಟ್ ಗಳು ದೊರೆತಿರುತ್ತವೆ. ಅದರಲ್ಲಿ ಒಂದು ಸೇಂದಿ ಪ್ಯಾಕೇಟನ್ನು ಪಂಚರರ ಸಮಕ್ಷಮ ಪ್ರತ್ಯೆಕವಾಗಿ ಜಪ್ತು ಮಾಡಿ ಎಸ್ ಡಿ ಎಂ ಸೀಲ್ ಮಾಡಿ ನಮ್ಮ ವಶಕ್ಕೆ ಪಡೆದುಕೊಂಡಿರುತ್ತೇವೆ. ಸದರಿ ಪಂಚನಾಮೆಯನ್ನು ಬೆಳ್ಳಿಗ್ಗೆ 10-00 ರಿಂದ 11-00 ಗಂಟೆಯ ವರೆಗೂ ಸ್ಥಳದಲ್ಲಿಯೇ ಬರೆದು ಮುಗಿಸಿರುತ್ತೇವೆ. ಈಗಾಗಲೇ ಜಪ್ತು ಪಂಚನಾಮೆಯನ್ನು ನಿ ಪಿ 1 ಎಂದು ಗುರುತಿಸಲಾಗಿದ್ದು ದಾಖಲೆಯ ಮೇಲೆ ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದರ ಮೇರೆಗ ಸಹಿಯನ್ನು ನಿ ಪಿ 1 (ಬಿ)ಎಂದು

ಗುರುತಿಸಲಾಯಿತು. ಚಾ ಸಾ 3 ರವರ ಹೆಬೆಟ್ಟಿನ ಗುರುತುಇದ್ದು ಸಾಕ್ಷಿ ರವರ ಸಮಕ್ಷಮ ರವರ ಹೆಬ್ಬೆಟ್ಟಿನ ಗುರುತನ್ನು ಹಾಕಿದ ಕಾರಣ ಈಗ ಸಾಕ್ಷಿಯು ಚಾ ಸಾ 3 ರವರ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಲಾಗಿದ್ದು ಸದರಿಯನ್ನು ನಿ ಪಿ 1(ಸಿ) ಎಂದು ಗುರುತಿಸಲಾಯಿತು. (ಆರೋಪಿಯು ಗೈರು ಹಾಜರಿದ್ದ ಕಾರಣ ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವಿಕೆಗೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ವ್ಯಕ್ತ ಪಡಿಸಿರುತ್ತಾರೆ). ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಮು ಮಾ ನ್ನು ನೋಡಿದರೆ ಗುರುತಿಸುತ್ತೇನೆ. ಸ್ಥಳದಿಂದ 11.30 ಗಂಟೆಗೆ ಠಾಣೆಗೆ ಬಂದು ಆರೋಪಿಯನ್ನು ಮತ್ತು ಮು ಮಾ ನ್ನು ಮತ್ತು ಜಪ್ತು ಪಂಚನಾಮೆಯನ್ನು ಮುಂದಿನ ಕ್ರಮಕ್ಕಾಗಿ ಚಾ ಸಾ 9 ರವರಿಗೆ ಒಪ್ಪಿಸಿರುತ್ತೇನೆ.

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಸೇಂದಿ ಮಾರಾಟ ಮಾಡುತ್ತಿದ್ದರ ಬಗ್ಗೆ ಕ್ರಮ ಜರುಗಿಸುವ ಕುರಿತು ಠಾಣಾಧಿಕಾರಿಗಳಿಗೆ ಪತ್ರಬರೆದಿದ್ದು ಆಗಿದ್ದು ಸದರಿ ದಾಖಲೆಯನ್ನು ನಿ ಪಿ 2 ಮತ್ತು ದಾಖಲೆಯ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದರ ಮೇರೆಗೆ ಸಹಿಯನ್ನು ನಿ ಪಿ 2 ಸ(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಎ ಎಂ ಆರೋಪಿ ಪರ ವಕೀಲರಿಂದ</u>**

ಕಲಕಂಬ ಊರಿನಲ್ಲಿ ಸುಮಾರು 2000 ಜನ ಸಂಖ್ಯೆ ಇರುವ ಊರು ಎಂದರೆ ಇರಬಹುದು. ಗುನ್ನ ಸ್ಥಳ ಊರಿನಲ್ಲಿಯೇ ಇದೆ ಎಂದರೆ ಸರಿ. ಶಾಂತ ಮೂರ್ತಿಯವರ ಮನೆಯ ಪಕ್ಕದಲ್ಲಿಯೇ ಸೇಂದಿ ಮಾರಾಟ ಮಾರುತ್ತಿದ್ದಾರೆ ಎಂದು ಮೊದಲು ಗೊತ್ತಿರಲಿಲ್ಲ. ಶಾಂತ ಮೂರ್ತಿಯವರ ಮನೆ ಎಂದು ತೋರಿಸುವುದಕ್ಕೆ ನಾನು ಅವರಹೇಳಿಕೆ ಪಡೆದಿಲ್ಲ. ನಾನು ಮತ್ತು ಸಿಬ್ಬಂದಿ ಪಂಚರರೋಂದಿಗೆ ಪೋಲೀಸ್ ಜೀಪ್‌ನಲ್ಲಿ ಸ್ಥಳಕ್ಕೆ ಹೋಗಿದ್ದೆವು. ಜೀಪಿನ ಸಂಖ್ಯೆ ಬರೆಸಿರುವುದಿಲ್ಲ. ಜೀಪಿನ ಚಾಲಕನ ಹೆಸರು ವಿಠಲ್ ರೆಡ್ಡಿ . 18-04-2018 ರಂದು ನಮಗೆ ಬಾತನಿಬಂದ ಮೇರೆಗೆ ಸಿಬ್ಬಂದಿ ಮತ್ತು ಪಂಚರರರೊಂದಿಗೆ ಗುನ್ನಾ ಸ್ಥಳಕ್ಕೆ ಹೋಗಿದ್ದು ಸುಳ್ಳು ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಆರೋಪಿತರಿಂದ 18 ಪ್ಯಾಕೇಟ್ ಸೇಂದಿ ಜಪ್ತು ಪಡಿಸಿದ್ದು ಸುಳ್ಳು ಎಂದರೆ ಸರಿಯಲ್ಲ. ನಾವು ನಮ್ಮ ಠಾಣೆಯ ಜೀಪಿನಲ್ಲಿ ಹೋಗಿದ್ದು ಸುಳ್ಳು ಎಂದರೆ ಸರಿಯಲ್ಲ.ಅದೇ ರೀತಿ ಚಾಲಕನ ಹೆಸರು ವಿಠಲ್ ರೆಡ್ಡಿ ಎಂದು ಸುಳ್ಳು ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಒಂದು ಪ್ಯಾಕೇಟ್ ಸೇಂದಿಯನ್ನು ರಾತಾಯನಿಕ ಪರೀಕ್ಷೆಗಾಗಿ ಜಪ್ತು ಪಡಿಸಿದ್ದು ಸುಳ್ಳು ಎಂದರೆ ಸರಿಯಲ್ಲ. ಪ್ರತಿ ತಿಂಗಳೂ ಎಸ್ ಪಿ ರವರು ಕ್ರೈಂ ಗಳ ಸಂಖ್ಯೆ ಕೇಳುತ್ತಾರೆ ಎಂದರೆ ಸರಿ. ಗುನ್ನಾ ಸಂಖ್ಯೆಗಳನ್ನು ಕೇಳುತ್ತಾರೆ ಎಂಬುದಕ್ಕೆ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದೇಃವೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ 10-00 ರಿಂದ 11-00 ಗಂಟೆಯ ವೆರೆಗೆ

ನಿ ಪಿ 1 ನ್ನು ಜರುಗಿಸಿದ್ದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗೂ ಮು ಮಾ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಘಟನೆಯಾಗದಿದ್ದರೂ ಮೇಲಧಿಕಾರಿಗಳ ಮಾತನ್ನು ಕೇಳಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರ.ದ.ನ್ಯಾದಂ.ಸೇಡಂ.

*Accused is absent. Counsel for accused files EP. Heard and allowed. Counsel for accused submits no dispute with respect to identification of accused. CW-1 examined as PW-3. And got marked Ex. P-1 (B) and (c) and Ex. P-2 and 2(A) R/WS to CW-6 and 9*

*Call on 23-10-2024.*

***JMFC, Sedam.***